ದಿನಾಂಕ 15-6-2015 ರಂದು ಬೆಳಿಗ್ಗೆ 11.00 ಗಂಟೆಗೆ ಕೊಠಡಿ ಸಂ. 252. ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ಮೂರನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಪ್ರಿಯಾಂಕ ಎಂ. ಖರ್ಗೆ | ಸದಸ್ಯರು |
| 3. | ಶ್ರೀ ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 4. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 5. | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 6. | ಶ್ರೀ ಕೆ.ಎಂ. ವೀರಯ್ಯ | ಸದಸ್ಯರು |
| 7. | ಡಾ. ಡಿ.ಎಂ. ಚಂದರಗಿ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ಮೂರನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಐಟಂ– 1 | **ದಿನಾಂಕ 3–3–2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆರಡನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 3–3–2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆರಡನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು.<br><br>**(ಕ್ರಮ: ಕುಲಸಚಿವರು)** |
| ಐಟಂ– 2 | **ದಿನಾಂಕ 3–3–2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆರಡನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ದಿನಾಂಕ 20–1–2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂದನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಲ್ಲಿ ಕಾರ್ಯಸೂಚಿ ಸಂಖ್ಯೆ. 6 ಮತ್ತು 11 ಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>ವಿಸ್ತೃತ ಚರ್ಚೆಯ ನಂತರ, ಸಿ.ಎ.ಎಸ್. 2006 ಪ್ರಕಾರ ಪದೋನ್ನತಿಗಾಗಿ ಕನಿಷ್ಠ ಅರ್ಹತೆಯನ್ನು ವಿಶೇಷವಾಗಿ ಪ್ರಕಟಣೆಗಳ ಕುರಿತು ಸರಕಾರದ ಆದೇಶ ಸಂ. AHD 64 AUM 2009 ದಿನಾಂಕ 24–3–2010 ಹಾಗೂ ಅಧಿಸೂಚನೆ ಸಂ. R/UASR/CAS-2006/817(A)/2012-13 ದಿನಾಂಕ 19–3–2013 ರಲ್ಲಿ ಕಲ್ಪಿಸಲಾದ ಅವಕಾಶಗಳನ್ವಯ ಅನುಷ್ಠಾನಗೊಳಿಸಲು ಸಲಹೆ ನೀಡುತ್ತಾ ಕಾರ್ಯಸೂಚಿ ಸಂಖ್ಯೆ. 10 ಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>ಮುಂದುವರೆದು, ವಿಶ್ವವಿದ್ಯಾಲಯ ಆದೇಶ ಸಂಖ್ಯೆ ಕುಸ/ಕೃವಿವಿರಾ/ವ್ಯೆ.ಮಂ.ಸಭೆ–21/4545/2014–15 ದಿನಾಂಕ 12–2–2015 ರ ಪ್ರಕಾರ ರಚಿಸಿದ ಸಮಿತಿಯಲ್ಲಿ ನುರಿತ ಸಿವಿಲ್ ಇಂಜಿನಿಯರರನ್ನು 5 ದಿನಗಳೊಳಗಾಗಿ ಗುರುತಿಸಿ ಆಯ್ಕೆಯ ಕ್ರಮವನ್ನು ಕೈಗೊಳ್ಳುವುದಾಗಿ ಮಾನ್ಯ ಅಧ್ಯಕ್ಷರು ಭರವಸೆ ನೀಡಿದರು.<br><br>ದಿನಾಂಕ 3–3–2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆರಡನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ: ಕುಲಸಚಿವರು)** |

| | |
|---|---|
| ಐಟಂ–3 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2013–14 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಅನುಮೋದನೆ ಕುರಿತು.<br>ಠರಾವು:<br>ವಿಸ್ತೃತ ಚರ್ಚೆಯ ನಂತರ, 2013–14 ನೇ ಸಾಲಿನ ವಾರ್ಷಿಕ ಖರ್ಚುವೆಚ್ಚಗಳಿಗೆ ಲೆಕ್ಕಪರಿಶೋಧನೆಗಾಗಿ ರಾಜ್ಯ ಲೆಕ್ಕಪತ್ರ ಇಲಾಖೆಗೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು) |
| ಐಟಂ–4 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2015–2016 ನೇ ಸಾಲಿನ ಆಯವ್ಯಯ ಅಂದಾಜು ಮತ್ತು 2014–2015 ನೇ ಸಾಲಿನ ಪರಿಷ್ಕೃತ ಆಯವ್ಯಯ<br>ಠರಾವು:<br>ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ 2015–2016 ನೇ ಸಾಲಿನ ಅಂದಾಜು ಆಯವ್ಯಯ ಮತ್ತು 2014–2015 ನೇ ಸಾಲಿನ ಪರಿಷ್ಕೃತ ಆಯವ್ಯಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು) |
| ಐಟಂ–5 | ವಯೋನಿವೃತ್ತಿ ಹೊಂದಿದ ಶಿಕ್ಷಕರನ್ನು ಅವರುಗಳ 70 ವರ್ಷಗಳ ವಯಸ್ಸಿನವರೆಗೆ ಸ್ನಾತಕೋತ್ತರ ಬೋಧನೆಗಾಗಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಳ್ಳುವ ಕುರಿತು.<br>ಠರಾವು:<br>ಚರ್ಚೆಯ ನಂತರ, ವಯೋನಿವೃತ್ತಿ ಹೊಂದಿದ ಶಿಕ್ಷಕರನ್ನು ಅವರುಗಳ 70 ವರ್ಷಗಳ ವಯಸ್ಸಿನವರೆಗೆ ಸ್ನಾತಕೋತ್ತರ ಬೋಧನೆಗಾಗಿ ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಳ್ಳಲು ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು) |
| ಐಟಂ–6 | ಹೂವಿನಹಡಗಲಿಯಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ತರಬೇತಿ ಕೊಠಡಿಗೆ ಸ್ಥಳ ದಾನಿಗಳ ಹೆಸರಿಡುವ ಕುರಿತು.<br>ಠರಾವು:<br>ವಿಸ್ತೃತ ಚರ್ಚೆಯ ನಂತರ, ಸದರಿ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು / ವಿಸ್ತರಣಾ ನಿರ್ದೇಶಕರು) |
| ಐಟಂ–7 | ಹೈದ್ರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯರಿಗಾಗಿ ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮೋದನೆ ನೀಡುವ ಕುರಿತು.<br>ಠರಾವು:<br>ಮಾನ್ಯ ವ್ಯವಸ್ಥಾಪನಾ ಮಂಡಳಿಯು 371(ಜೆ) ಅನುಸಾರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳು ಪ್ರಕ್ರಿಯೆಯ ವಿಷಯವನ್ನು ಪ್ರಸ್ತುತಪಡಿಸಲಾಯಿತು. 371(ಜೆ) ಅನುಸಾರ ಖಾಲಿ ಇರುವ ಹುದ್ದೆಗಳನ್ನು ಜಾಹಿರಾತುಪಡಿಸಲು ಸಿದ್ಧಪಡಿಸಿದ್ದು, ಇದಕ್ಕೆ ಡಿ.ಪಿ.ಎ.ಆರ್. ನ ಅನುಮೋದನೆ ಪಡೆಯಲು ಸರಕಾರಕ್ಕೆ ಸಲ್ಲಿಸಲಾಗಿದೆ. ಈ ಕುರಿತು ಸರಕಾರದ ಅನುಮೋದನೆ ದೊರೆತ ತಕ್ಷಣವೇ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಒಪ್ಪಿಗೆಗಾಗಿ ಘನ ವೇದಿಕೆಯ ಮುಂದೆ ಮಂಡಿಸಲಾಗುವುದು. (ಕ್ರಮ : ಕುಲಸಚಿವರು) |
| ಐಟಂ–8 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ಮತ್ತು ವಸತಿ ಭತ್ಯೆ ಹೆಚ್ಚಿಸಲು ಹಾಗೂ ಅವರುಗಳಿಗೆ ಲ್ಯಾಪ್‌ಟಾಪ್ ಒದಗಿಸಲು ಅನುಮೋದನೆ ನೀಡುವ ಕುರಿತು.<br>ಠರಾವು:<br>ವಿವರವಾದ ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು ಹಾಗೂ ಮೂಲ ಹಂತದ (basic version) ಲ್ಯಾಪ್‌ಟಾಪ್‌ಗಳನ್ನು ಕೃವಿವಿ ರಾಯಚೂರಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಸಂಗ್ರಹಣಾ ಪದ್ಧತಿಯನುಸಾರ ಖರೀದಿಸಿ ಒದಗಿಸಲು ತೀರ್ಮಾನಿಸಲಾಯಿತು. |

| | |
|---|---|
| | ಮುಂದುವರೆದು, ಸಾಮಾಜಿಕ ಕರ್ತವ್ಯಗಳ ಕಾರ್ಪೋರೇಟ್ ಸಂಸ್ಥೆಯಾದ ಸುಧಾಮೂರ್ತಿ ಫೌಂಡೇಶನ್ ಅವರೊಂದಿಗೆ ಸಂಪರ್ಕಿಸಿ ಹಣಕಾಸಿನ ನೆರವನ್ನು ಪಡೆಯಲು ಪ್ರಯತ್ನಿಸಬೇಕೆಂದು ಘನ ವೇದಿಕೆಯು ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು)** |
| **ಐಟಂ–9** | **ಓಟಿಸ್ ಮೇಕ್‌ನ ಎಲಿವೇಟರ್ (ಲಿಫ್ಟ್) ಗಳನ್ನು ಖರೀದಿಸುವ ಸಲುವಾಗಿ ಅನುಮೋದನೆ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಅತ್ಯವಶ್ಯಕ ತಾಂತ್ರಿಕ ವಿವರಗಳು (technical specifications) ಹಾಗೂ ಅವರೊಂದಿಗೆ ನಿಷ್ಕರ್ಷಿಸುವ ಸಲಹೆಯೊಂದಿಗೆ ಅವಶ್ಯಕವಿರುವ ಉತ್ತಮ ಗುಣಮಟ್ಟದ ಎಲಿವೇಟರ್ ಅನ್ನು ಖರೀದಿಸಲು ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು / ಕಾರ್ಯನಿರ್ವಾಹಕ ಅಭಿಯಂತರರು)** |
| **ಐಟಂ–10** | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| **ಐಟಂ–1** | **ಕೃಷಿ ಮತ್ತು ಕೃಷಿ ತಾಂತ್ರಿಕತೆಯ ಡಿಪ್ಲೋಮ ಕೋರ್ಸ್‌ಗಳನ್ನು ನಡೆಸಲು ಹುದ್ದೆಗಳನ್ನು ಸೃಜಿಸುವ ಕುರಿತು**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕೃಷಿ ಡಿಪ್ಲೋಮ ಶಿಕ್ಷಣವನ್ನು ಉತ್ತಮಗೊಳಿಸುವಲ್ಲಿ ಅವಶ್ಯಕವಾಗಿ ಬೇಕಾಗಿರುವ ವಿವರಣೆಗಳಾದ ಹುದ್ದೆಗಳ ಸೃಜನೆ ಹಾಗೂ ಶಿಕ್ಷಕ–ವಿದ್ಯಾರ್ಥಿಗಳ ಅನುಪಾತ, ಕೋರ್ಸ್‌ಗಳ ಸಂಖ್ಯೆ, ಕ್ರೆಡಿಟ್ ಹವರ್ ಮತ್ತು ಕೋರ್ಸ್ ಲೋಡ್‌ಗಳ ವಿವರಗಳ ಸಮರ್ಥನೆಗಳೊಂದಿಗೆ ಪ್ರಸ್ತಾವನೆಯನ್ನು ಪುನರ್–ರಚಿಸಲು ತಿಳಿಸುವುದರೊಂದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಈ ವಿಷಯವನ್ನು ಮುಂದೂಡಲು ತೀರ್ಮಾನಿಸಿತು. **(ಕ್ರಮ: ಕುಲಸಚಿವರು / ಡೀನ್(ಸ್ನಾತಕೋತ್ತರ)** |
| **ಐಟಂ–2** | **ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯ ಸ್ಥಾಪನೆ**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಪುನರ್–ನಿಯೋಜನೆ ಮಾಡುವುದರೊಂದಿಗೆ ಕೃವಿವಿ ರಾಯಚೂರಿನಲ್ಲಿ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯ ಸ್ಥಾಪನೆಯ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| **ಐಟಂ–3** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕೃಷಿ ವಾಣಿಜ್ಯ ಪೋಷಣಾ ಕೇಂದ್ರದ ಸ್ಥಾಪನೆ**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಪುನರ್–ನಿಯೋಜನೆ ಮಾಡುವುದರೊಂದಿಗೆ ಹಾಗೂ ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿಯ ನವೀನ ಯೋಜನೆಗಳ ಅನುದಾನದಿಂದ ಹಣಕಾಸಿನ ನೆರವಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವ ಸಲಹೆಯೊಂದಿಗೆ ಕೃವಿವಿ ರಾಯಚೂರಿನಲ್ಲಿ ಕೃಷಿ ವಾಣಿಜ್ಯ ಪೋಷಣಾ ಕೇಂದ್ರದ (ABI) ಸ್ಥಾಪನೆಯ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು |
|---|---|
| | ➢ ಮುಂಬರುವ 5 ವರ್ಷಗಳು ಹಾಗೂ 10 ವರ್ಷಗಳಲ್ಲಿ ಕೈಗೊಳ್ಳಬೇಕಾಗಿರುವ ವಿವಿಧ ಅಭಿವೃದ್ಧಿ ಚಟುವಟಿಕೆಗಳ ವಿವರಗಳನ್ನು ಸೂಚಿಸುವ ಕೃವಿವಿ ರಾಯಚೂರಿನ ದೂರದೃಷ್ಟಿ ಯೋಜನೆಯನ್ನು (Perspective Plan) ಪರಿಣಿತರೊಂದಿಗೆ ಸಮಾಲೋಚಿಸಿ ನಿಗದಿತ ಅವಧಿಯೊಳಗೆ ತಯಾರಿಸಲು ನಿರ್ಧರಿಸಲಾಯಿತು.<br>➢ ಶಾಸಕರಿಂದ ಕೊಡಲಾಗುವ ಸಂಸ್ಥೆಗಳ ಅನುದಾನದ ಅಡಿಯಲ್ಲಿ ರೂ. 10.00 ಲಕ್ಷಗಳವರೆಗೆ ಕೊಡಲು ಸಿದ್ಧರಿರುವ ಶಾಸಕರಿಂದ ವಿಶ್ವವಿದ್ಯಾಲಯದ ಅಭಿವೃದ್ಧಿ ಕಾರ್ಯಗಳಿಗಾಗಿ ಹಣಕಾಸಿನ ನೆರವನ್ನು ಪಡೆಯಲು ಪ್ರಯತ್ನ ಮಾಡುವಂತೆ ತೀರ್ಮಾನಿಸಲಾಯಿತು. ಅನುದಾನ ನೀಡಲು ಸಿದ್ಧರಿರುವ ಬಾಹ್ಯ ಸಂಸ್ಥೆಗಳೊಂದಿಗೆ ಅಂದರೆ ವಿನೋದ್ ಖೋಸ್ಲಾ ವೆಂಚರ್ ಅವರೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಂತ್ರಜ್ಞಾನಗಳ ವಾಣಿಜ್ಯಕರಣಕ್ಕಾಗಿ ಹಣಕಾಸಿನ ನೆರವು ಪಡೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br>➢ ಕೃವಿವಿ ರಾಯಚೂರಿನಲ್ಲಿ ಅಗ್ರಿ-ಬಿಸಿನೆಸ್ ಮ್ಯಾನೇಜ್‌ಮೆಂಟ್ ಪೀಠ ಸ್ಥಾಪಿಸಲು ಸಲಹೆ ನೀಡುತ್ತಾ, ಕಾರ್ಯಕ್ರಮಗಳನ್ನು ಹೊಂದಾಣಿಕೆ ಮಾಡಿಕೊಳ್ಳುವುದರೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ತಯಾರಿಸಿ ಕೇಂದ್ರಕ್ಕೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br>➢ ತರಬೇತುದಾರರಿಗೆ ತರಬೇತಿ ಏರ್ಪಡಿಸುವ ಪ್ರಸ್ತಾವನೆಯನ್ನು ಡಿ.ಪಿ.ಎ.ಆರ್. ಗೆ ಸಲ್ಲಿಸಲು ನಿರ್ಧರಿಸಲಾಯಿತು ಹಾಗೂ ಕೃವಿವಿ ರಾಯಚೂರಿನಲ್ಲಿ ಎನ್.ಎ.ಎ.ಆರ್.ಎಂ. ಹೈದರಾಬಾದ್ ನ ಪರಿಣಿತರ ಸೇವೆಯನ್ನು ಹೊರಗಿನ ಆವರಣದಲ್ಲಿ ತರಬೇತಿ ಅಡಿ ಉಪಯೋಗಿಸಿಕೊಳ್ಳುವಂತೆ ಅಧ್ಯಕ್ಷರು ಸಲಹೆ ನೀಡಿದರು.<br>➢ ದಿವಂಗತ ಶ್ರೀ ಮಹಾದೇವರೆಡ್ಡಿ, ತಾಂತ್ರಿಕ ಅಧಿಕಾರಿಗಳು (ಕೃಷಿ ಹವಾಮಾನ) ಇವರ ವೈದ್ಯಕೀಯ ವೆಚ್ಚ ಮರುಪಾವತಿಗೆ ಸಂಬಂಧಪಟ್ಟಂತೆ ಶ್ರೀಯುತರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಜಿಲ್ಲಾ ವೈದ್ಯಾಧಿಕಾರಿಗಳವರಿಂದ ಪರಿಶೀಲಿಸಲು ಹಾಗೂ ಅರ್ಹತಾ ಮೊತ್ತವನ್ನು ಮಂಜೂರು ಮಾಡಲು ಹಣಕಾಸು ಸಮಿತಿಯು ಸಲಹೆ ನೀಡಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಸದರಿ ವಿಷಯವನ್ನು ಅನುಮೋದಿಸಲಾಯಿತು. |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

23

(ಪಿ.ಎಂ. ಸಾಲಿಮಠ)
ಕುಲಪತಿಗಳು ಹಾಗೂ ಅಧ್ಯಕ್ಷರು
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಕುಲಪತಿಗಳು
ಕೃ. ವಿ. ರಾಯಚೂರು

(ಡಿ.ಎಂ. ಚಂದರಗಿ)
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.